ಶ್ರೀ ಸಿದ್ದರಾಮಯ್ಯ: ನೀವು ಆ ತರಹ ಅಲ್ಲಿ follow ಮಾಡಬೇಕೆಂದು ಏನೂ ಇಲ್ಲ. ಆಂಧ್ರದಲ್ಲಿ ಮಾಡಿದ್ದಾರೆಂದು ಕರ್ನಾಟಕದಲ್ಲಿ ಇದನ್ನು ಅನುಸರಿಸಬೇಕೆಂದು ಏನೂ ಇಲ್ಲ.

ಅಧ್ಯಕ್ಷರು: ಆಯಿತು. ಇದನ್ನು ಈಗ ಮುಕ್ತಾಯ ಮಾಡೋಣ.

ಶ್ರೀ ಸಿದ್ದರಾಮಯ್ಯ: ಮಾನ್ಯ ಸಚಿವರೆ, ಯಾವುದಕ್ಕೋ ಏನೇನೋ ಹೇಳಿದರೆ ಹೇಗೆ?

ಅಧ್ಯಕ್ಷರು: ಈಗ ಎನ್.ಎ. ಹ್ಯಾರೀಸ್‌ರವರೆ, ತಾವು ಪ್ರಶ್ನೆಯನ್ನು ಕೇಳಿ.

ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುದಾನ 1568
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 8 (31)

ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ ಕ್ಷೇತ್ರ)

ಅ) ರಾಜ್ಯದಲ್ಲಿ ಈಗಾಗಲೇ ಅನುಮತಿ ನೀಡಿರುವ ಇನ್ನು ಮುಂದೆ ಅನುಮತಿ ನೀಡಲು ಉದ್ದೇಶಿಸಿರುವ ಖಾಸಗಿ ವಿಶ್ವವಿದ್ಯಾಲಯಗಳು, ಸಂಸ್ಥೆಗಳು ಯಾವುವು (ಹೆಸರು ಸಹಿತ ವಿವರ ನೀಡುವುದು).

ಆ) ಖಾಸಗಿ ವಿಶ್ವವಿದ್ಯಾಲಯ ಅನುಮತಿ ನೀಡುವಾಗ ವಿಧಿಸಲಾಗಿರುವ ಷರತ್ತುಗಳೇನು;

ಇ) ಖಾಸಗಿ ಸಂಸ್ಥೆಗಳ ಸಹಭಾಗಿತ್ವದಿಂದ ಶಿಕ್ಷಣ ಕ್ಷೇತ್ರಕ್ಕೆ ಒದಗಿ ಬರುವ ಪ್ರತಿಫಲಗಳೇನು? (ವಿವರ ನೀಡುವುದು)

ಶ್ರೀ ಸಿ.ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಈಗಾಗಲೇ ಅನುಮತಿ ನೀಡುರವ ಖಾಸಗಿ ವಿಶ್ವವಿದ್ಯಾಲಯಗಳು:

1) ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯ
2) ಅಲೈಯನ್ಸ್ ವಿಶ್ವವಿದ್ಯಾಲಯ:

ಅನುಮತಿ ನೀಡಲು ಉದ್ದೇಶಿಸಿರುವ ಖಾಸಗಿ ವಿಶ್ವವಿದ್ಯಾಲಯಗಳು:

1) ಮಣಿಪಾಲ ವಿಶ್ವವಿದ್ಯಾಲಯ, ಬೆಂಗಳೂರು
2) ಅರ್ಕ ವಿಶ್ವವಿದ್ಯಾಲಯ, ಬೆಂಗಳೂರು
3) ಅಮೃತ ಸಿಂಚನ ಸ್ಪಿರುಚಿಯಲ್ ವಿಶ್ವವಿದ್ಯಾಲಯ, ಬೆಂಗಳೂರು
4) ಶ್ರೀ ದಯಾನಂದಸಾಗರ ವಿಶ್ವವಿದ್ಯಾಲಯ, ಬೆಂಗಳೂರು
5) ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯ ಆಫ್ ಅಪ್ಲೈಡ್ ಸೈನ್ಸ್, ಬೆಂಗಳೂರು.
6) ಪಿ.ಇ.ಎಸ್. ವಿಶ್ವವಿದ್ಯಾಲಯ, ಬೆಂಗಳೂರು.
7) ರಾಯ್ ಫೌಂಡೇಷನ್, ನವದೆಹಲಿ.
8) ಶ್ರೀ ದೇವರಾಜ ಅರಸ್ ವಿಶ್ವವಿದ್ಯಾಲಯ, ಬೆಂಗಳೂರು.
9) ವೆಲ್ಲೂರು ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ ವಿಶ್ವವಿದ್ಯಾಲಯ, ಬೆಂಗಳೂರು.
10) ಆದಿಚುಂಚನಗಿರಿ ವಿಶ್ವವಿದ್ಯಾಲಯ, ಬೆಳ್ಳೂರು ಕ್ರಾಸ್.
11) ಕೆ.ಎಲ್.ಇ. ಟೆಕ್ನಲಾಜಿಕಲ್ ವಿಶ್ವವಿದ್ಯಾಲಯ, ಹುಬ್ಬಳ್ಳಿ.
12) ರೇವಾ ವಿಶ್ವವಿದ್ಯಾಲಯ, ಬೆಂಗಳೂರು.
13) ಶರಣಬಸವ ವಿಶ್ವವಿದ್ಯಾಲಯ, ಗುಲ್ಬರ್ಗಾ.
14) ನ್ಯೂ ಬಾಲ್ಡ್‌ವಿನ್ ವಿಶ್ವವಿದ್ಯಾಲಯ, ಬೆಂಗಳೂರು.
15) ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು.
16) ಸಿ.ಎಂ.ಆರ್.ವಿಶ್ವವಿದ್ಯಾಲಯ, ಬೆಂಗಳೂರು.

ಆ) ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ಅನುಬಂಧ–2 ರಲ್ಲಿ ಲಗತ್ತಿಸಿದೆ.

ಅನುಬಂಧ –1

ಖಾಸಗಿ ವಿಶ್ವವಿದ್ಯಾಲಯಕ್ಕೆ ಅನುಮತಿ ನೀಡುವಾಗ ವಿಧಿಸಲಾಗುವ ಷರತ್ತುಗಳು:

1) ಸಂಸ್ಥೆಯು ವಿಶ್ವವಿದ್ಯಾಲಯವನ್ನು ನಡೆಸಲು ಅರ್ಹತೆ ಹೊಂದಿದ್ದು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಾದರೆ 25 ಎಕರೆ ಜಮೀನು, ಬಿ.ಎಂ.ಆರ್.ಡಿ.ಎ. ವ್ಯಾಪ್ತಿಯ ಒಳಗೆ ಇದ್ದಲ್ಲಿ 40 ಎಕರೆ ಜಮೀನು ಮತ್ತು ಉಳಿದ ಸ್ಥಳದಲ್ಲಾದರೆ 60 ಎಕರೆ ಜಮೀನು ಹೊಂದಿರಬೇಕು ಹಾಗೂ ಒಂದೇ ಹಾಸಿಗೆಯದ್ದಾಗಿರಬೇಕು ಮತ್ತು ಅದರ ಮಾಲೀಕತ್ವ ಸಂಬಂಧಿಸಿದ ಟ್ರಸ್ಟ/ಫೌಂಡೇಷನ್/ಸಂಸ್ಥೆ/ ವಿಶ್ವವಿದ್ಯಾಲಯದ ಹೆಸರಿನಲ್ಲಿರಬೇಕು.
2) ರೂ. 25.00 ಕೋಟಿ ರೂ.ಗಳ ಶಾಶ್ವತ ಶಾಸನಬದ್ದ ನಿಧಿಯನ್ನು ಸ್ಥಾಪಿಸಬೇಕು.
3) ಅಗತ್ಯ ಮೂಲಭೂತ ಸೌಕರ್ಯ ಮತ್ತು ಅರ್ಹ ಸಿಬ್ಬಂದಿ ಅವಶ್ಯಕತೆ ಹೊಂದಿರಬೇಕು.
4) ರಾಷ್ಟ್ರೀಯ ಪ್ರಾಧಿಕಾರಗಳಿಂದ ಗುಣ ಅರ್ಹ ಸಿಬ್ಬಂದಿ ಪತ್ರವನ್ನು ಪಡೆಯಬೇಕು.
5) ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಮೀಸಲಾತಿ ಒದಗಿಸಬೇಕು. ಹಾಗೂ ಸರ್ಕಾರದ ಆದೇಶದನ್ವಯ ವಿವಿಧ ವರ್ಗದ ವಿದ್ಯಾರ್ಥಿಗಳಿಗೆ ಮೀಸಲಾತಿಯನ್ನು ನೀಡತಕ್ಕದ್ದು.
6) ಸರ್ಕಾರವು ಒಬ್ಬ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಶುಲ್ಕ ನಿಯಂತ್ರಣ ಸಮಿತಿಯನ್ನು ರಚಿಸತಕ್ಕದ್ದು.
7) ಆಡಳಿತ ಮಂಡಳಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ/ವೈದ್ಯಕೀಯ ಶಿಕ್ಷಣ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಸದಸ್ಯರಾಗಿರತಕ್ಕದ್ದು.
8) ದೂರ ಶಿಕ್ಷಣಕ್ಕೆ ಅವಕಾಶವಿರುವುದಿಲ್ಲ ಹಾಗೂ ಯಾವುದೇ ಸಂಯೋಜಿತ ಕಾಲೇಜುಗಳನ್ನು ಹೊಂದಲು ಅವಕಾಶವಿರುವುದಿಲ್ಲ.

ಅನುಬಂಧ –2

1) ಇಂದು ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಪದವೀಧರರಾಗಬಯಸುತ್ತಿದ್ದು, ಇಂದಿನ ಯುವ ಪೀಳಿಗೆಯವರಲ್ಲಿ ಉನ್ನತ ಶಿಕ್ಷಣ ಆಕಾಂಕ್ಷೆ ಗಣನೀಯವಾಗಿ ಹೆಚ್ಚುತ್ತಿದೆ.
2) ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ, ಶಿಕ್ಷಣದ ಕಡ್ಡಾಯ ಹಕ್ಕು ಜಾರಿ, ಮತ್ತು ಪ್ರೌಢ ಶಿಕ್ಷಣದ ಸಾರ್ವತ್ರಿಕರಣದ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಮುಂಬರುವ ವರ್ಷಗಳಲ್ಲಿ ಪ್ರೌಢ ಶಿಕ್ಷಣದಿಂದ ಹೊರಹೊಮ್ಮುತ್ತಿರುವ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ.
3) ಉನ್ನತ ಶಿಕ್ಷಣ ಬಯಸುವವರ ಸಂಖ್ಯೆ ಏರುತ್ತಿರುವುದರಿಂದ ಹಾಲಿ ಇರುವ ವಿಶ್ವವಿದ್ಯಾಲಯಗಳಿಂದ ಹೆಚ್ಚಾದ ಬೇಡಿಕೆಯನ್ನು ಸಮರ್ಥವಾಗಿ ಪೂರೈಸಬೇಕಾಗಿದೆ.
4) ಕರ್ನಾಟಕವು ಜ್ಞಾನಧಾರಿತ ಆರ್ಥಿಕತೆಯುಳ್ಳ ಬಲಿಷ್ಟ ಜ್ಞಾನ ಸಮಾಜದ ನಿರ್ಮಾಣದ ಕನಸು ಹೊತ್ತಿದೆ.
5) ಭಾರತವು ಉನ್ನತ ಶಿಕ್ಷಣ ಪಡೆಯಲಿಚ್ಚಿಸುವ ವಿದ್ಯಾರ್ಥಿಗಳ ಆಮದು ಮತ್ತು ರಫ್ತು ಮಾಡುವ ರಾಷ್ಟ್ರವಾಗಿದ್ದು ಆಮದು ಕಡಿಮೆ ಇದ್ದು, ಜಗತ್ತಿನ ಜ್ಞಾನ ಕೇಂದ್ರ ಬಿಂದುವಾಗುವ ಹೆಬ್ಬಯಕೆ ಕರ್ನಾಟಕದ್ದಾಗಿದ್ದು ಅದರ ಸಾಧನೆಗಾಗಿ ಹೆಚ್ಚಿನ ಮೂಲಭೂತ ಸೌಕರ್ಯ ಮತ್ತು ಉತ್ಕೃಷ್ಟ ಮಾನ್ಯ ಸಂಪನ್ಮೂಲದ ಅವಶ್ಯಕತೆಯನ್ನು ಪೂರೈಸುವುದಾಗಿದೆ.

ಶ್ರೀ ಎನ್.ಎ.ಹ್ಯಾರೀಸ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಓದಗಿಸಿದ್ದಾರೆ. ಬಹುಶಃ ಸರ್ಕಾರವು ಮುಂದೆ 16 ವಿಶ್ವವಿದ್ಯಾಲಯಗಳಿಗೆ ಅನುಮತಿಯನ್ನು ನೀಡುವವರಿದ್ದಾರೆ. ಸುಮಾರು ಒಳ್ಳೆಯ Conditions ಗಳನ್ನೂ ಸಹ ಹಾಕಿದ್ದಾರೆ. ಆದರೆ ಈಗಾಗಲೇ ಕೊಟ್ಟಿರುವಂತಹ Universities ಗಳಲ್ಲಿ ಕಳೆದ ಅಧಿವೇಶನದಲ್ಲಿ ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯ ಮತ್ತು ಅಲೈಯೆನ್ಸ್ ವಿಶ್ವವಿದ್ಯಾಲಯ ಎರಡನ್ನು

ಪಾಸ್ ಮಾಡಿದ್ದೇವೆ. ಈಗ 50% reservation ನಮ್ಮ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಈಗಾಗಲೇ ನಾವು ಹೊಸದಾಗಿ ವಿಶ್ವವಿದ್ಯಾಲಯಗಳಿಗೆ ಕೊಡುವುದಕ್ಕೆ ಮಾಡುತ್ತಿದ್ದೀರಿ. ಈಗಾಗಲೇ ಕೊಟ್ಟಿರುವುದಂತಹ ವಿಶ್ವವಿದ್ಯಾಲಯಗಳಿಗೂ ಕೂಡ same conditions ಬರುತ್ತದೆಯೇ? ಇಲ್ಲಾ ಈ ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯ, ಇನ್ನೂ ಕೆಲವು University ಗಳು ಈಗ ಏನು ಆಗಿದೆ ಅವುಗಳಿಗೂ ಇದು ಬರುತ್ತದೆಯೋ? ಅಥವಾ ಇಲ್ಲವಾ? ಎಂಬುವುದು ಗೊತ್ತಾಗಬೇಕಾಗಿತ್ತು. ಹಾಗೆಯೇ ಮಣಿಪಾಲ ವಿಶ್ವವಿದ್ಯಾಲಯ ಎಂದು ಏನು ಕೊಡುತ್ತಿದ್ದೀರಿ, ಅಲ್ಲಿ ಯಾರಿಗೂ ನಮ್ಮ ರಾಜ್ಯದವರಿಗೆ ಆಗಲಿ ಯಾರಿಗೂ ಸೀಟ್ ಅನ್ನು ಕೊಡುವುದಿಲ್ಲ. ಅವರು University ಮಾಡಿದರೆ ನಮ್ಮ ವಿದ್ಯಾರ್ಥಿಗಳಿಗೆ ಏನು ಅನುಕೂಲವಾಗುತ್ತದೆನ್ನುವುದು ಕೂಡ ಗೊತ್ತಾಗಬೇಕು. ಏಕೆಂದರೆ, ವಿದ್ಯಾಭ್ಯಾಸ ಇವತ್ತು ನಮ್ಮ ರಾಜ್ಯದಲ್ಲಿ ತುಂಬಾ ಮುಖ್ಯವಾಗಿರುತ್ತದೆ. ಇಲ್ಲಿ ಯುವಕರು ಜಾಸ್ತಿ ಇರುವಂತಹದ್ದು, ಇದರಲ್ಲಿ ಮಾಡುತ್ತಿರುವುದು ಖಂಡಿತವಾಗಿಯೂ ಒಳ್ಳೆಯದು. ನಮ್ಮ ರಾಜ್ಯದಲ್ಲಿ ಇಷ್ಟೊಂದುUniversity ಗಳು ಬಂದ ಮೇಲೆ ನಮ್ಮ ಮಕ್ಕಳಿಗೆ ಅನುಕೂಲವಾಗಲಿಲ್ಲವೆಂದರೆ ಬೇರೆಯವರಿಗೆ ಇದರಿಂದ ಅನುಕೂಲವಾಗುವುದಾದರೆ ಇದರಿಂದ ನಮಗೇನು ಪ್ರಯೋಜನ? ದಯವಿಟ್ಟು ಈ ಬಗ್ಗೆ ಮಾನ್ಯ ಸಚಿವರು ಏನು ಮಾಡುತ್ತೀರಿ ಎನ್ನುವುದು ಈಗಾಗಲೇ ಕೊಟ್ಟಿರುವುದಕ್ಕೆ ಹೇಗೆ ಮಾಡಿದ್ದೀರಿ ಎನ್ನುವುದನ್ನು ಹೇಳಬೇಕಾಗುತ್ತದೆ.

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಎರಡು ವಿಶ್ವವಿದ್ಯಾಲಯಗಳು ಊರ್ಜಿತದಲ್ಲಿದೆ. (1) ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯ (2) ಅಲ್ಬೈಯೆನ್ಸ್ ವಿಶ್ವವಿದ್ಯಾಲಯ. ಕಳೆದ ಬೆಳಗಾಂ ಅಧಿವೇಶನದಲ್ಲಿ 13 ಖಾಸಗಿ ವಿಶ್ವವಿದ್ಯಾಲಯಗಳಿಗೆ ಈ ಸದನವು ಸಹಮತಿಯನ್ನು ಕೊಟ್ಟಿದೆ. ಆ ಬಗ್ಗೆ Government Order ಆಗಿ ವಿಶ್ವವಿದ್ಯಾಲಯಗಳು ಇನ್ನೂ establish ಆಗಿರುವುದಿಲ್ಲ. ಖಾಸಗಿ

ವಿಶ್ವವಿದ್ಯಾಲಯಗಳು ಬೇಕಾಗಿರುವಂತಹ ಉದ್ದೇಶ ರಾಷ್ಟ್ರೀಯ ಜ್ಞಾನ ಆಯೋಗ ಪ್ರತಿ ಜಿಲ್ಲೆಗೂ ಒಂದು ವಿಶ್ವವಿದ್ಯಾಲಯ ಇರಬೇಕೆನ್ನುವಂತಹ ಶಿಫಾರಸ್ಸನ್ನು ಮಾಡಿದೆ. ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಶಿಕ್ಷಣಕ್ಕೆ ದೊಡ್ಡಪ್ರಮಾಣದಲ್ಲಿ ಖಾಸಗಿ ಬಂಡವಾಳವನ್ನು ತೊಡಗಿಸಬೇಕೆನ್ನುವಂತಹ ಇಚ್ಛೆಯನ್ನು ಸಹ ವ್ಯಕ್ತಪಡಿಸಿದೆ. ಅದಕ್ಕೆ ಕೊಟ್ಟಿರುವಂತಹ ಕಾರಣನೇನೆಂದರೆ, Global level ನಲ್ಲಿ ಇರುವಂತಹ Top-10 ವಿಶ್ವವಿದ್ಯಾಲಯಗಳು. ಇದನ್ನು ಆದ್ಯತೆಯ ಮೇರೆಗೆ ತೆಗೆದುಕೊಂಡರೆ ಅವುಗಳು ಖಾಸಗಿ ವಿಶ್ವವಿದ್ಯಾಲಯಗಳಿವೆ. ಆ ರೀತಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ Higher Education ಗೆ ಖಾಸಗಿ ಬಂಡವಾಳ ಹರಿದುಬರುವಂತಹ ಉದ್ದೇಶವು ಕೂಡ ಇದೆ.

ನಮ್ಮ ರಾಜ್ಯದಲ್ಲಿ ಒಟ್ಟು 195 ಇಂಜಿನಿಯರಿಂಗ್ ಕಾಲೇಜುಗಳಿವೆ. ಅದರಲ್ಲಿ 181 ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು. ಕೇವಲ 14 ಮಾತ್ರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು. ಅದರಲ್ಲಿಯೂ 5 ವರ್ಷಗಳಿಂದ ಈಚೆಗೆ ಪ್ರಾರಂಭವಾದಂಥ ಇಂಜಿನಿಯರಿಂಗ್ ಕಾಲೇಜುಗಳು 13. ಮೊದಲು ಇಡೀ ರಾಜ್ಯದಲ್ಲಿ ಒಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮಾತ್ರ ಇತ್ತು. ಖಾಸಗಿ ಸಹಭಾಗಿತ್ವದ ಕಾರಣದಿಂದಲೇ ಕರ್ನಾಟಕ ಒಂದು ಐ.ಟಿ. State ಎಂದು ಗುತುತಿಸಿಕೊಳ್ಳುವುದಕ್ಕೆ ಕಾರಣವಾಯಿತು. ಹಾಗಾಗಿ ಖಾಸಗಿ ಸಹಭಾಗಿತ್ವ higher education ನಲ್ಲಿ ದೊಡ್ಡ ಪ್ರಾಮಾಣದಲ್ಲಿ ಬಂಡವಾಳವನ್ನು ಹೂಡುತ್ತಾರೆ. ಅದರಲ್ಲಿ 40% ರಷ್ಟು ಮಾತ್ರ ರಾಜ್ಯದ ವಿದ್ಯಾರ್ಥಿಗಳಿಗೆ ಮೆರಿಟ್ ಮತ್ತು ನಮ್ಮ ರಿಸರ್ವೇಷನ್ ಬೇಸಿಸ್‌ನಲ್ಲಿ ಕೊಡುವಂಥ ಕೆಲಸವನ್ನು ಮಾಡಿದೆ. ಈ ಎರಡು ವಿಶ್ವವಿದ್ಯಾಲಯಗಳಿಗೆ ಈ ಹಿಂದೆ ಅನುಮತಿ ಕೊಟ್ಟಿರುವುದರ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಪ್ರತಿ ವಿಶ್ವವಿದ್ಯಾಲಯಕ್ಕೂ ಪ್ರತ್ಯೇಕ ಬಿಲ್ ಅದು. ನಾವು Private University Bill ಎಂದು ಒಟ್ಟಾಗಿ ಬಿಲ್ ತರಲಿಕ್ಕೆ ಬರುವುದಿಲ್ಲ. ಈಗ ಆ ಎರಡೂ ಬಿಲ್‌ಗಳು ಮೊದಲೇ ಪಾಸ್ ಆಗಿವೆ. ಅದರೊಳಗೆ 40% state

reservation ಇಲ್ಲ. ಆ Act ನಲ್ಲಿ ನಿರ್ದಿಷ್ಟವಾಗಿ ಏನೂ ಹೇಳಿಲ್ಲ. 25% reservation ಅವರು provide ಮಾಡಿದ್ದಾರೆ. ಆ reservation ರಾಜ್ಯ ಸರ್ಕಾರ ಕೊಟ್ಟಿರುವ ಮಾನದಂಡದ ಮೇಲೆ ಮಾಡಿಲ್ಲ. ಒಟ್ಟು ಅವರು ಭರ್ತಿ ಮಾಡಿಕೊಂಡಿರುವುದರಲ್ಲಿ 25% state quota ಎಂದು ಮಾಡಿದ್ದಾರೆ. ಆದರೆ ನಾವೀಗ ರಾಜ್ಯ ಸರ್ಕಾರ ಸೂಚನೆ ಕೊಡುವಂಥ ಮಾನದಂಡದ ಆಧಾರದಲ್ಲಿ 40% ಸೀಟುಗಳನ್ನು ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ ಕೊಡಬೇಕೆಂದು ತಿದ್ದುಪಡಿ ತಂದಿದ್ದೇವೆ. ಹಾಗಾಗಿ ಖಾಸಗಿ ಸಹಭಾಗಿತ್ವ ಶಿಕ್ಷಣ ಕ್ಷೇತ್ರಕ್ಕೆ ಅವಶ್ಯಕತೆ ಇದೆ. ಆ ನಿಟ್ಟಿನಲ್ಲಿಯೇ ಖಾಸಗಿ ವಿಶ್ವವಿದ್ಯಾಲಯ ಮಸೂದೆಗೆ ಸರ್ಕಾರ ಅಂಗೀಕಾರ ಕೊಟ್ಟಿದೆ.

ಶ್ರೀ ಎನ್.ಎ. ಹ್ಯಾರೀಸ್: ಇದು ಬಹಳ ಮುಖ್ಯವಾದ ಪ್ರಶ್ನೆಯಾಗಿದೆ. ಅಧ್ಯಕ್ಷರೆ, ದಯವಿಟ್ಟು urgent ಮಾಡಬೇಡಿ ಸಚಿವರು ಏನು ಹೇಳುತ್ತಿದ್ದಾರೆಂದರೆ, ಎರಡು ಯೂನಿವರ್ಸಿಟಿ ಕೊಟ್ಟಿರುವುದು ನಮಗೇನೂ ಗೊತ್ತಿಲ್ಲ. ನಾವು ತಪ್ಪು ಮಾಡಿದ್ದೇವೆ. 40% ಸಾಕಾಗುವುದಿಲ್ಲ, 50% ಕೊಡಬೇಕು. ಇದರಲ್ಲಿ ಆಗಿ mistake ಆಗಿದ್ದರೂ ಸಹ ಇದನ್ನು 50% ಮಾಡುವುದೆ ಒಳ್ಳೆಯದು. ಏಕೆಂದರೆ ಇದರಲ್ಲಿ ನಮ್ಮ ರಾಜ್ಯದಲ್ಲಿರುವ ಮಕ್ಕಳಿಗೆ ಅವಕಾಶವನ್ನು ಮಾಡಿಕೊಡದೆ ಬೇರೆಯವರಿಗೆ ಅವಕಾಶ ಕೊಡುತ್ತಿದ್ದೇವೆ. Correct, ಯೂನಿವರ್ಸಿಟಿಗಳು ಆಗಬೇಕು. Education ನಲ್ಲಿ private participation ಬೇಕು. ನಾವು ಇದನ್ನೆಲ್ಲಾ ಸ್ವಾಗತ ಮಾಡೋಣ. ನಮ್ಮ ಮಕ್ಕಳ ಬಗ್ಗೆ ನಾವು ಆಲೋಚನೆ ಮಾಡದೆಯೇ ಬೇರೆಯವರಂತೂ ಆಲೋಚನೆ ಮಾಡುವುದಿಲ್ಲ. ಮಾನ್ಯ ಸಚಿವರೆ, ಎರಡು ಯೂನಿವರ್ಸಿಟಿಗಳಿಗೆ ನಾವೇನೂ ಕಂಡಿಷನ್ ಹಾಕಿಲ್ಲವೆಂದು ಹೇಳಿದಿರಿ. ತಾವು ಕಂಡಿಷನ್ ಹಾಕಬೇಕು. ಅದನ್ನು ನಾವು ತಿದ್ದುಪಡಿ ಮಾಡಲೇಬೇಕಾಗುತ್ತದೆ. ಅದು ಪ್ರತ್ಯೇಕ ಬಿಲ್ ಆಗಿದ್ದರೂ ಸಹ ನಾವು ಒಂದೊಂದು ದಿವಸ 10–15 ಬಿಲ್‌ಗಳನ್ನು ಪಾಸ್ ಮಾಡುತ್ತೇವೆ. ಇನ್ನೊಂದು ಸಾರಿ ತಂದು ಪಾಸ್ ಮಾಡಿ. ಏನೂ ಆಗುವುದಿಲ್ಲ. ಏಕೆಂದರೆ

ನಮ್ಮ ರಾಜ್ಯದ ಮಕ್ಕಳಿಗೋಸ್ಕರ ಇದನ್ನು ನಾವು ಮಾಡದಿದ್ದರೆ ಇನ್ಯಾರು ಮಾಡುತ್ತಾರೆ? ಅದಲ್ಲದೆ ಈಗಾಗಲೇ ಬೇರೆ ಸುಮಾರು ಯೂನಿವರ್ಸಿಟಿಗಳು ಆಗಿರುವುದು ನಮ್ಮ ರಾಜ್ಯದಲ್ಲಿದೆ. ಅವುಗಳು ಏನು ಮಾಡುತ್ತಿವೆ ಎಂದು ನಾವು ಹೇಳಿಲ್ಲ. ಈಗಾಗಲೇ ಈ ಎರಡು ಯೂನಿವರ್ಸಿಟಿಗಳಿಗಿಂತ ನೀವು ಸುಮಾರು ಯೂನಿವರ್ಸಿಟಿಗಳನ್ನು ಮಾಡಿದ್ದೀರಿ. ಅವರು ನಮಗೇನಾದರೂ ಕೊಡುತ್ತಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಕೂಡ ದಯವಿಟ್ಟು ಹೇಳಬೇಕು.

ಶ್ರೀ ಸಿ.ಟಿ.ರವಿ: ಅಧ್ಯಕ್ಷರೆ, ಈಗ ಹಾಲಿ ಎರಡು ಖಾಸಗಿ ವಿಶ್ವವಿದ್ಯಾಲಯಗಳು ಊರ್ಜಿತದಲ್ಲಿರುವುದು. ಒಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಇನ್ನೊಂದು Alliance ವಿಶ್ವವಿದ್ಯಾಲಯ. ಇವು ಖಾಸಗಿ ವಿಶ್ವವಿದ್ಯಾಲಯಗಳು. ಬೇರೆ deemed ವಿಶ್ವವಿದ್ಯಾಲಯಗಳು ಇವೆ. ಖಾಸಗಿ ವಿಶ್ವವಿದ್ಯಾಲಯಗಳು ಎಂದಿರುವುದು ಇವೆರಡೆ. ಈಗ ಸದನ 13 ವಿಶ್ವವಿದ್ಯಾಲಯಗಳನ್ನು ಪಾಸ್ ಮಾಡಿರುವುದು 13 + 2 ಒಟ್ಟು 15 ಖಾಸಗಿ ವಿಶ್ವವಿದ್ಯಾಲಯಗಳು. ಅವರ ಭಾವನೆಯೇನೆಂದರೆ ಈಗ ನಾವು 40% ಮಿನಿಮಮ್ ಕೊಡಬೇಕು ಎಂದು. Maximum ಅವರು 100% ಕೊಡಬಹುದು. ಮಿನಿಮಮ್ 40% ಕೊಡಬೇಕೆಂದು ಹೇಳಿದೆ.

ಶ್ರೀ ಎನ್.ಎ.ಹ್ಯಾರೀಸ್: 100% ಎಲ್ಲಿ ಕೊಡುತ್ತಾರೆ, ಅವರು 40 ಪರ್ಸಂಟೇ ಕೊಡುವುದಿಲ್ಲ. 40% ಕೊಟ್ಟಿದ್ದಾರೆಯೇ ಎಂದು ನಾವು ನೋಡಬೇಕಾಗಿದೆ.

ಶ್ರೀ ಸಿ.ಟಿ. ರವಿ: ಕೊಡಬಹುದು. ಕೊಡುತ್ತಾರೆ ಎಂದು ಹೇಳಲಿಲ್ಲ.

ಶ್ರೀ ಎನ್.ಎ.ಹ್ಯಾರೀಸ್: ನೀವು ಅದನ್ನೇ ಹೇಳುತ್ತೀರಿ. 100% ಕೊಡುತ್ತಾರೆಂದರೆ ಏನಿದು? ನಮ್ಮ ಕರ್ನಾಟಕ ರಾಜ್ಯದ ಮಕ್ಕಳಿಗಾಗಿ ನಾವು ಇಲ್ಲಿ ತೀರ್ಮಾನ ಮಾಡದಿದ್ದರೆ ಅಲ್ಲಿ ತೀರ್ಮಾನ ಮಾಡಲಿಕ್ಕೆ ಸಾಧ್ಯವೇ? ದಯವಿಟ್ಟು ಹೇಳಿ.

ಶ್ರೀ ಸಿ.ಟಿ.ರವಿ: ಮಾನ್ಯ ಸದಸ್ಯರ ಕಾಳಜಿಯನ್ನು ನಾನು ಒಪ್ಪುತ್ತೇನೆ. ಆದರೆ ನಾವು ಈ ಒಂದು Act ಅನ್ನು ತರಬೇಕಾದರೆ ಬೇರೆ ಬೇರೆ ರಾಜ್ಯಗಳ ಖಾಸಗಿ ವಿಶ್ವವಿದ್ಯಾಲಯಗಳ ಮಸೂದೆಗಳ draft ತರಿಸಿಕೊಂಡು ಚೆಕ್ ಮಾಡಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ maximum 15% ಇದೆ. ನಮ್ಮ ರಾಜ್ಯದಲ್ಲಿ 40% ಗೆ ತೆಗೆದುಕೊಂಡು ಹೋಗಿದ್ದೇವೆ. ರಾಜಸ್ತಾನ, ಹಿಮಾಚಲ್ ಪ್ರದೇಶ, ಉತ್ತರ ಪ್ರದೇಶ ರಾಜ್ಯಗಳ draft ನೋಡಿದ್ದೇವೆ. ಈ draft ಮಾಡಬೇಕಾದರೆ ನಮಗೆ ಒಂದು ಮಾನದಂಡ ಬೇಕಲ್ಲವೇ?

ಶ್ರೀ ಎನ್.ಎ.ಹ್ಯಾರೀಸ್: ಈಗ ನಾವು 50% ಮಾಡದಿದ್ದರೆ ನಮ್ಮ ಮಕ್ಕಳು ಬೇರೆ ರಾಜ್ಯಕ್ಕೆ ಹೋಗಬೇಕಾಗುತ್ತದೆ. ನೀವು ಅದನ್ನು ಮಾಡಬೇಕು.

ಶ್ರೀ ಸಿ.ಟಿ.ರವಿ: ಸದನದಲ್ಲಿ ಆ ಬಿಲ್ ಬಂದಾಗ ಇವರೆಲ್ಲಾ ಸಲಹೆಗಳನ್ನು ಕೊಟ್ಟಿದ್ದರೆ ಅದನ್ನು adopt ಮಾಡಿಕೊಳ್ಳುವುದಕ್ಕೂ ಯೋಚನೆ ಮಾಡಬಹುದಾಗಿತ್ತು. ಆಗ ಅವರು ಸಲಹೆಯನ್ನು ಕೊಡಲಿಲ್ಲ. ನಾನು complaint ಮಾಡುತ್ತಿಲ್ಲ. ಈ ಸದನವೇ ಆ ಬಿಲ್ ಅನ್ನು ಪಾಸ್ ಮಾಡಿರುವುದು.

ಶ್ರೀ ಎನ್.ಎ.ಹ್ಯಾರೀಸ್: ಸದನದಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಲಿಲ್ಲ. ಆ ಬಿಲ್ ಒಂದೇ ಸಾರಿ ಪಾಸ್ ಆಗಿ ಹೋದರೆ ನಾವೇನು ಮಾಡುವುದು? ನೀವು ಅವಕಾಶ ಕೊಟ್ಟಿದ್ದರೆ ನಾವು ಮಾತನಾಡುತ್ತಿದ್ದೆವು. ನೀವು ನಮಗೆ ಮಾತನಾಡಲಿಕ್ಕೆ ಎಲ್ಲಿ ಅವಕಾಶ ಕೊಟ್ಟಿರಿ?

ಅಧ್ಯಕ್ಷರು: ನೀವು ಆಗ ಸಭಾತ್ಯಾಗ ಮಾಡಿ ಹೋಗಿಬಿಟ್ಟಿದ್ದರಲ್ಲ, ಏನು ಮಾಡಲಿಕ್ಕಾಗುತ್ತದೆ? ಈಗ ಸಾಕಷ್ಟು ಚರ್ಚೆಯಾಗಿದೆ. ಪ್ಲೀಸ್, ನೀವು ಇದನ್ನು ಬೇರೆ ರೂಪದಲ್ಲಿ ತನ್ನಿ, ಅವಕಾಶ ಕೊಡುತ್ತೇನೆ.

ಶ್ರೀ ಎನ್.ಎ.ಹ್ಯಾರೀಸ್: ಇದನ್ನು ಯಾರಿಗೋಸ್ಕರ ತರುವುದು ಸರ್?

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 06–02–2013 ರ 1 ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 39 ಪ್ರಶ್ನೆಗಳ ಪೈಕಿ 34 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಆಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ –1)

2. ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಕಾಗದ ಪತ್ರವನ್ನು ಮಂಡಿಸುವುದು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

(ಶ್ರೀ. ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಅಧ್ಯಕ್ಷರು)